


International Journal of Kannada Research
www.kannadajournal.com

ISSN: 2454–5813
IJKR 2023; 9(3): 189-194
© 2023 IJKR
www.kannadajournal.com
Received: 01-05-2023
Accepted: 05-06-2023

**ಸುಧಾ ಎ. ಆರ್**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ,
ಐ.ಡಿ.ಎಸ್.ಜಿ ಸರ್ಕಾರಿ
ಕಾಲೇಜು ಚಿಕ್ಕಮಗಳೂರು,
ಕರ್ನಾಟಕ, ಭಾರತ

Corresponding Author:
**ಸುಧಾ ಎ. ಆರ್**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ,
ಐ.ಡಿ.ಎಸ್.ಜಿ ಸರ್ಕಾರಿ
ಕಾಲೇಜು ಚಿಕ್ಕಮಗಳೂರು,
ಕರ್ನಾಟಕ, ಭಾರತ

# ಮಹಿಳಾ ಸಾಹಿತ್ಯ – ಹುಟ್ಟು ಮತ್ತು ಬೆಳವಣಿಗೆ

**ಸುಧಾ ಎ. ಆರ್**

**DOI:** https://doi.org/10.22271/24545813.2023.v9.i3c.977

**ಪೀಠಿಕೆ**

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕ್ರಿ.ಪೂ.ದಷ್ಟು ಪ್ರಾಚೀನತೆಯಿದ್ದರೂ ಮಹಿಳೆಯ ಹೆಜ್ಜೆ ಗುರುತು ಅಥವಾ ಇರುವಿಕೆಯು ಬಹಳ ತಡವಾಗಿ ಕಂಡು ಬರುತ್ತದೆ. ಜನಪದ ಸಾಹಿತ್ಯದ ಮೂಲ ಚೇತನ ಮಹಿಳೆಯೇ ಆಗಿದ್ದರೂ, ಶಿಷ್ಟ ಸಾಹಿತ್ಯ ಸಂದರ್ಭದಲ್ಲಿ ಇದು ತದ್ವಿರುದ್ಧವಾಗಿ ಮಹಿಳಾ ಅಭಿವ್ಯಕ್ತಿಗಳು ಹಿಂದೆ ಸರಿದಿರುವುದನ್ನು ಕಾಣಬಹುದು. "ಜೀವನಾನುಭವಗಳ ಅಭಿವ್ಯಕ್ತಿಯೇ ಸಾಹಿತ್ಯ" ಎಲ್ಲಾ ಕ್ಷೇತ್ರಗಳಂತೆ ಸಾಹಿತ್ಯ ಕ್ಷೇತ್ರದಲ್ಲೂ ಪುರುಷ ಪ್ರಾಧಾನ್ಯತೆಯನ್ನೇ ಸ್ಥಾಪಿಸಿಕೊಂಡು ಬರಲಾಗಿದೆ. ಮಹಿಳಾ ಸಾಹಿತ್ಯ ಎಂಬ ಪರಿಕಲ್ಪನೆಯು ಮಹಿಳೆಯರು ಬರೆದ ಸಾಹಿತ್ಯ ಎಂಬರ್ಥದಲ್ಲಿಯೇ ಬಳಕೆಯಾಗುತ್ತಿದೆ. ರೀಟಾ ಫೆಲ್ಸ್ಕಿ ಎಂಬುವವರು ಮಹಿಳಾ ಸಾಹಿತ್ಯ ಎಂಬ ಪರಿಕಲ್ಪನೆಯ ಜೊತೆಗೆ ಸ್ತ್ರೀವಾದಿ ಸಾಹಿತ್ಯ ಎಂಬ ಇನ್ನೊಂದು ಪರಿಕಲ್ಪನೆಯನ್ನು ಬಳಸುತ್ತಾ, ಮಹಿಳಾ ಸಾಹಿತ್ಯವನ್ನು ಎರಡು ಬಗೆಯಲ್ಲಿ ವರ್ಗೀಕರಿಸಿ, ಲಿಂಗ ವ್ಯವಸ್ಥೆಯನ್ನು ಸಮಸ್ಯೀಕರಿಸಿಕೊಂಡ ಬರವಣಿಗೆಯು ಮಾತ್ರ ಸ್ತ್ರೀವಾದಿ ಸಾಹಿತ್ಯವಾಗಿದ್ದು, ಉಳಿದಂತೆ ಮಹಿಳೆಯರಿಂದ ಬರೆಯಲಾಗುವ ಎಲ್ಲಾ ಸಾಮಾನ್ಯ ಬರವಣಿಗೆಯನ್ನು ಆಕೆ ಮಹಿಳಾ ಸಾಹಿತ್ಯ ಎನ್ನುತ್ತಾರೆ.

## ಮಹಿಳಾ ಸಾಹಿತ್ಯದ ಪ್ರಾರಂಭದ ಹೆಜ್ಜೆ ಗುರುತುಗಳು

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪುರುಷರಂತೆ ಮಹಿಳೆಯರೂ ಸಾಹಿತ್ಯ ರಚಿಸಿದ್ದರೂ, ಮಹಿಳೆಯರ ಸಂಖ್ಯೆ ತೀರಾ ಕಡಿಮೆ. "ಕಂತಿ–ಹಂಪರ ಸಮಸ್ಯೆಗಳು" ಎಂಬ ಕೃತಿ ರಚಿಸಿದಳೆನ್ನಲಾದ ಕಂತಿ ಎಂಬ ಕವಯಿತ್ರಿಯಿಂದ ಮಹಿಳಾ ಸಾಹಿತ್ಯವನ್ನು ಗುರುತಿಸಬಹುದಾದರೂ, ಸರಿಯಾದ ಸಾಕ್ಷ್ಯಾಧಾರಗಳ ಕೊರತೆಯಿಂದ ಕಂತಿಯನ್ನು ಅಧಿಕೃತವಾಗಿ ಕನ್ನಡದ ಮೊದಲ ಕವಯಿತ್ರಿ ಎಂದು ಗುರುತಿಸುವಲ್ಲಿ ತೊಡಕುಗಳಿವೆ. ಹಾಗಾಗಿ ೧೨ನೇ ಶತಮಾನದಲ್ಲಿ ಬರುವ ಅಕ್ಕಮಹಾದೇವಿಯನ್ನೇ ಕನ್ನಡದ ಮೊದಲ ಕವಯಿತ್ರಿಯಾಗಿ, ವಚನಕಾರ್ತಿಯಾಗಿ, ಸ್ತ್ರೀವಾದಿ ಚಳುವಳಿಯ ಪ್ರತಿಪಾದಕಿಯಾಗಿ ಗುರುತಿಸಲಾಗಿದೆ.

ಆ ನಂತರ ವಚನ ಸಾಹಿತ್ಯ ಸಂದರ್ಭದಲ್ಲಿ ಅಕ್ಕಮ್ಮ, ರೆಮ್ಮವ್ವೆ, ಗಂಗಮ್ಮ, ನೀಲಲೋಚನೆ, ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವೆ ಮುಂತಾದ ೩೫ಕ್ಕೂ ಹೆಚ್ಚು ವಚನಕಾರ್ತಿಯರನ್ನು ಗುರುತಿಸಬಹುದು.

ನಂತರ ೧೭ನೇ ಶತಮಾನದಲ್ಲಿ ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಸಂಚಿ ಹೊನ್ನಮ್ಮ ಮತ್ತು ಶೃಂಗಾರಮ್ಮ ಎಂಬ ಕವಯಿತ್ರಿಯರಿದ್ದ ಬಗ್ಗೆ ದಾಖಲೆಗಳಿವೆ. ಶೃಂಗಾರಮ್ಮ "ಪದ್ಮಿನಿ ಕಲ್ಯಾಣ" ಎಂಬ ಕೃತಿಯನ್ನು ಬರೆದಿದ್ದಾಳೆ. ಸಂಚಿ ಹೊನ್ನಮ್ಮ "ಹದಿಬದೆಯ ಧರ್ಮ" ಎಂಬ ಸಾಂಗತ್ಯ ಕೃತಿಯನ್ನು ಬರೆದಿದ್ದು ಈ ಕೃತಿಯು ಸಮಾಜದಲ್ಲಿನ ಪುರುಷ ಪ್ರಾಧಾನ್ಯತೆಯನ್ನು ಒಪ್ಪಿಕೊಂಡು, ಪುರುಷನ ಸುಖ-ಸಂತೋಷಗಳಿಗೆ ಹೆಣ್ಣು ಹೇಗೆ ತನ್ನನ್ನು ತಾನು ಅರ್ಪಿಸಿಕೊಳ್ಳಬೇಕೆಂಬ ವಿವರಗಳಿಂದಲೇ ತುಂಬಿ ಹೋಗಿದೆ. ಕುವರನಾದೊಡೆ ಬಂದ ಗುಣವೇನದರಿಂದ, ಕುವರಿಯಾದೊಡೆ ಕುಂದೇನು?, ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು, ಪೆಣ್ಣ ನಿಂದಿಸಲೇಕೆ ಪೆರರು ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು ಎಂಬ ಕೆಲವು ಪದ್ಯಗಳಲ್ಲಿ ಸ್ತ್ರೀಪರವಾದ ಧ್ವನಿಯನ್ನು ಕಾಣಬಹುದು.

ದಾಸ ಸಾಹಿತ್ಯದಲ್ಲಿ ಹರಪನಹಳ್ಳಿ ಭೀಮವ್ವ, ರುಕ್ಮಿಣಿಬಾಯಿ, ಗಲಗಲಿಯ ಅವ್ವ, ವಿಜಾಪುರದ ಪ್ರಯಾಗ ಬಾಯಿ, ಹೆಳವನಕಟ್ಟೆ ಗಿರಿಯಮ್ಮ ಮುಂತಾದವರನ್ನು ಗುರುತಿಸ ಬಹುದು. ಗಲಗಲಿಯ ಅವ್ವ ಹರಿದಾಸ ಸಾಹಿತ್ಯದ ಮೊದಲ ಮಹಿಳಾ ಸಾಹಿತಿ.

## ಆಧುನಿಕ ಮಹಿಳಾ ಸಾಹಿತ್ಯ

೧೯ನೇ ಶತಮಾನಕ್ಕಿಂತ ಪೂರ್ವದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಮಹಿಳಾ ಸಾಹಿತಿಗಳನ್ನು ಗುರುತಿಸ ಬಹುದಾದರೂ, ಆ ನಂತರ ಹಂತ ಹಂತವಾಗಿ ಮಹಿಳಾ ಅಭಿವ್ಯಕ್ತಿ ಹೆಚ್ಚು ಹೆಚ್ಚು ಸ್ಪಷ್ಟತೆಯ ಕಡೆಗೆ ಬೆಳೆದುದನ್ನು ಗುರುತಿಸ ಬಹುದು. ೨೦ನೇ ಶತಮಾನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತ್ವದ ಬದಲಾವಣೆಗಳನ್ನು ಕಂಡ ಕಾಲ. ಒಂದರ್ಥದಲ್ಲಿ ಇದನ್ನು ಮಹಿಳಾ ಸಾಹಿತ್ಯದ ಆರಂಭಕಾಲ ಎಂದು ಕರೆಯ ಬಹುದು. ಸಮಾಜದ ಎಲ್ಲಾ ವರ್ಗಗಳಿಗೂ ದೊರೆತ ಶಿಕ್ಷಣ, ಸುಧಾರಣಾ ಚಳುವಳಿಗಳು, ಹೊಸ ಹೊಸ ಚಿಂತನೆಗಳು , ಹೋರಾಟಗಳಿಂದಾಗಿ ಮಹಿಳಾ ಸಾಹಿತ್ಯದ ಬೆಳವಣಿಗೆಗೆ ಒಂದು ಹೊಸ ಚಾಲನೆ ದೊರೆತಂತಾಯಿತು. ಹಲವಾರು ಮಹಿಳೆಯರು ತಮ್ಮ ಬರಹಗಳ ಮೂಲಕ ಹೆಣ್ಣಿನ ಬದುಕಿನ ವಾಸ್ತವ ಚಿತ್ರಣವನ್ನು ತೆರೆದು ತೋರಿಸುವ ಪ್ರಯತ್ನ ಮಾಡಿದರು.

ನಂಜನಗೂಡು ತಿರುಮಲಾಂಬ, ಭಾರತಿ ಕಾವ್ಯನಾಮದಿಂದ ಪ್ರಸಿದ್ಧರಾದ ತಿರುಮಲೆ ರಾಜಮ್ಮ, ಆರ್. ಕಲ್ಯಾಣಮ್ಮ, ಶಾಂತಾಬಾಯಿ ನೀಲಗಾರ, ಎಚ್.ವಿ ಸಾವಿತ್ರಮ್ಮ, ಗಿರಿಬಾಲೆ, ಶ್ಯಾಮಲಾದೇವಿ, ಬೆಳಗೆರೆ ಜಾನಕಮ್ಮ, ಕೊಡಗಿನ ಗೌರಮ್ಮ, ಸರಸ್ವತಿ ಬಾಯಿ ರಾಜವಾಡೆ ಜಯದೇವಿ ತಾಯಿ ಲಿಗಾಡೆ, ಶಾಂತಾ ದೇವಿ ಮಾಳವಾಡ ಮುಂತಾದ ಲೇಖಕಿಯರನ್ನು ಮೊದಲ ಹಂತದ ಲೇಖಕಿಯರೆಂದು ಗುರುತಿಸ ಬಹುದು. ಶಾಂತಾಬಾಯಿ ನೀಲಗಾರ ಅವರ ಸದ್ಗುಣಿ ಕೃಷ್ಣಬಾಯಿ ಮೊದಲ ಮಹಿಳಾ ಕಾದಂಬರಿ ಎನಿಸಿದೆ. ನಂಜನಗೂಡು ತಿರುಮಲಾಂಬ ಅವರು ೧೯೧೩ ರಲ್ಲಿ ಸತಿ ಹಿತೈಷಿಣಿ ಎಂಬ ಗ್ರಂಥಮಾಲೆಯ ಮೂಲಕ ಸುಶೀಲೆ ಎಂಬ ತಮ್ಮ ಮೊದಲ ಕಾದಂಬರಿಯನ್ನು ಪ್ರಕಟಿಸಿದರು. ನಂತರ ನಭಾ, ವಿರಾಗಿಣಿ, ವಿದ್ಯುಲ್ಲತಾ, ಗಿರಿಜಾ ಬಾಯಿ, ಪೂರ್ಣಕಲಾ ಎಂಬ ಕಾದಂಬರಿಗಳನ್ನು ರಚಿಸಿ ಅಂದಿನ ಸಮಾಜದಲ್ಲಿ ಸ್ತ್ರೀಯರನ್ನು ಕಂಡ ಬಗೆ, ವಿಧವಾ ಹೆಣ್ಣಿನ ಸಮಸ್ಯೆಗಳು, ಮಹಿಳೆಯ ಹಕ್ಕಿನ ಬಗ್ಗೆ ಪ್ರಶ್ನಿಸುವ ಹಕ್ಕಿನ ಅರಿವನ್ನು ಮೂಡಿಸುವುದನ್ನು ಕಾಣಬಹುದು.

ತಿರುಮಲಾಂಬ ಅವರ ನಂತರದ ಪ್ರಮುಖ ಬರಹಗಾರ್ತಿ ಆರ್. ಕಲ್ಯಾಣಮ್ಮ. ೧೯೨೭ರಲ್ಲಿ ಸುಖಲತಾ, ಎಂಬ ತಮ್ಮ ಮೊದಲ ಕಾದಂಬರಿ ಪ್ರಕಟಗೊಳಿಸಿದರು. ಭಕ್ತಿ ಮೀರಾ, ಸತಿ ಪದ್ಮಿನಿ, ಷಹಜಹಾನ್, ಸ್ನೇಹಲತಾ, ಮಾಧವಿ, ನಿರ್ಮಲೆ ನೀರದಾ, ರಣಕೇಸರಿ, ಇಂದಿರೆ ಹಾಗೂ ಪ್ರಿಯಂವಧೆ ಎಂಬುವು ಇವರ ಇತರ ಕಾದಂಬರಿಗಳು. ಇವರು ತಮ್ಮ ಕೃತಿಗಳಲ್ಲಿ ಸ್ತ್ರೀ ಶಿಕ್ಷಣದ ಅಗತ್ಯ, ಪುರುಷನಿಗೆ ಸರಿ ಸಮಾನಳಾಗಿ, ಸ್ವಾವಲಂಬಿಯಾಗಿ, ಬುದ್ಧಿವಂತಳಾಗಿ ಬದುಕ ಬೇಕೆಂಬ ಧೈರ್ಯ, ಆತ್ಮ ವಿಶ್ವಾಸವನ್ನು ತುಂಬುವ ವಿಚಾರಗಳನ್ನು ಪ್ರತಿಪಾದಿಸುತ್ತಾರೆ.

ಭಾರತಿ ಕಾವ್ಯನಾಮದಿಂದ ಪ್ರಸಿದ್ಧರಾದ ತಿರುಮಲೆ ರಾಜಮ್ಮ ಸಂಗೀತ ಕಲಾವಿದೆ, ಸ್ವಾತಂತ್ರ್ಯ ಹೋರಾಟಗಾರ್ತಿ, ಬರಹಗಾರ್ತಿ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡವರು. ತಪಸ್ವಿನಿ ಎಂಬ ನಾಟಕದಲ್ಲಿ ಊರ್ಮಿಳೆಯ ಆದರ್ಶವನ್ನು, ಮಹಾಸತಿ ನಾಟಕದಲ್ಲಿ ದೇಕಬ್ಬೆಯ ಸತಿಯ ಬಲಿದಾನವನ್ನು, ವಾತ್ಸಲ್ಯ ತರಂಗ ಲೀಲಾ ನಾಟಕದಲ್ಲಿ ಮೇನಕೆಯ ಮಾತೃ ವಾತ್ಸಲ್ಯವನ್ನು ಮಹಿಳಾ ನೆಲೆಯಲ್ಲಿ ಕಟ್ಟಿದ್ದಾರೆ. ಅಲ್ಲದೆ ಹಲವು ಕವಿತೆಗಳನ್ನು ಕೂಡ ಬರೆದಿದ್ದಾರೆ.

ಇದೇ ಸಂದರ್ಭದಲ್ಲಿ ಗುರುತಿಸ ಬಹುದಾದ ಮತ್ತೊಂದು ಹೆಸರು ಬೆಳಗೆರೆ ಜಾನಕಮ್ಮ. ಆಧುನಿಕ ಮಹಿಳಾ ಕಾವ್ಯ ಪರಂಪರೆಯ ಮೊದಲ ಧ್ವನಿ ಬೆಳಗೆರೆ ಜಾನಕಮ್ಮ ಅವರದು. "ಕಲ್ಯಾಣ" ಎಂಬುದು ಇವರ ಸಮಗ್ರ ಕವನ ಸಂಕಲನ. ಇವರು ತಮ್ಮ ಕವನಗಳಲ್ಲಿ ಸುತ್ತ ಮುತ್ತಲಿನ ದೈನಂದಿನ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸಿದ್ದಾರೆ. ಇವರೊಟ್ಟಿಗೆ ಗುರುತಿಸಲ್ಪಡುವ ಮತ್ತೊಂದು ಹೆಸರು ಕೊಡಗಿನ ಗೌರಮ್ಮನವರದು. ತಮ್ಮ ೨೮ನೇ ವಯಸ್ಸಿನಲ್ಲಿಯೇ ತೀರಿಕೊಂಡ ಇವರು ಕಂಬನಿ ಚಿಗುರು, ಮನುವಿನ ರಾಣಿ, ಅಪರಾಧಿ ಯಾರು ಎಂಬ ಉತ್ತಮ ಕಥಾ ಸಂಕಲನಗಳನ್ನು ಹೊರ ತಂದಿದ್ದಾರೆ. ಕನ್ನಡದ ಪ್ರಥಮ ಕಥೆಗಾರ್ತಿ ಎಂಬ ಹಿರಿಮೆ ಇವರದು.

ಎಚ್.ವಿ ಸಾವಿತ್ರಮ್ಮ ಅವರ ಕಾದಂಬರಿ "ಸೀತೆ ರಾಮ ರಾವಣ"ದಲ್ಲಿ ಹೆಣ್ಣಿನ ಮಾನಸಿಕ ವೇದನೆಗಳ ವಿಶ್ಲೇಷಣೆಯಿದೆ. ಶ್ಯಾಮಲಾ ದೇವಿ ಬೆಳಗಾಂವಕರ್ ಅವರು ತಮ್ಮ ಕೃತಿಗಳ ಮೂಲಕ ಸಾಮಾಜಿಕ ಸಮಸ್ಯೆಗಳಿಗೆ ಕಲಾತ್ಮಕ ರೂಪ ಕೊಟ್ಟವರು. ಇವರ ಕಥಾ ಸಂಕಲನಗಳು ಹೂ ಬಿಸಿಲು, ಹೊಂಬಿಸಿಲು. ಎಚ್. ಎಸ್ ಕಾತ್ಯಾಯಿನಿಯವರು ಅವರು "ಗಂಗಾ ತರಂಗ" ಎಂಬ ಕಾದಂಬರಿಯನ್ನು, ಸುಶೀಲಾ ಜೋಷಿ ಅವರು ಬೀಳದ ತೆರೆ ಎಂಬ ಕಾದಂಬರಿಯನ್ನು ಬರೆದಿದ್ದಾರೆ.

ವಾಣಿ, ತ್ರಿವೇಣಿ, ಅನುಪಮಾ ನಿರಂಜನ, ಎಂ.ಕೆ ಇಂದಿರಾ ಇವರನ್ನು ಎರಡನೇ ಹಂತದ ಲೇಖಕಿಯರೆಂದು ಗುರುತಿಸ ಬಹುದು. ವಾಣಿ ಎಂಬ ಕಾವ್ಯನಾಮದ ಮೂಲಕ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿ ಕೊಂಡವರು ಬಿ. ಎನ್ ಸುಬ್ಬಮ್ಮ. ಬಿಡುಗಡೆ, ಚಿನ್ನದ ಪಂಜರ, ಹೂವು ಮುಳ್ಳು, ಹೊಸ ಬೆಳಕು, ಎರಡು ಕನಸು, ಕಾವೇರಿ ಮಡಿಲಲ್ಲಿ ಎಂಬ ಕಾದಂಬರಿಗಳನ್ನು , ಕಸ್ತೂರಿ, ಅರ್ಪಣೆ, ಅಪರೂಪದ ಅತಿಥಿ ಎಂಬ ಕಥಾ ಸಂಕಲನಗಳನ್ನು ಬರೆದಿದ್ದಾರೆ. ೩೩ಕ್ಕೂ ಹೆಚ್ಚು ಕೃತಿಗಳನ್ನು ಬರೆದಿರುವ ವಾಣಿಯವರ ಕೃತಿಗಳು ಸಾಂಸಾರಿಕ ಚೌಕಟ್ಟಿನಲ್ಲೇ ಸಾರ್ಥಕತೆ ಕಾಣುತ್ತವೆ. ತಾವು ಬದುಕಿದ ಕಾಲದ ಪರಿಸರದ ವ್ಯಕ್ತಿಗಳ ಚಿತ್ರಣ ಅವರ ಆಚಾರ-ವಿಚಾರಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಈ ಕಾಲ ಘಟ್ಟದ ಮತ್ತೊಂದು ಪ್ರಸಿದ್ಧವಾದ ಹೆಸರು ಎಂ.ಕೆ ಇಂದಿರಾ. ಇವರ ಪ್ರಸಿದ್ಧವಾದ ಕಾದಂಬರಿ ಫಣಿಯಮ್ಮ. ಈ ಕಾದಂಬರಿಯಲ್ಲಿ ಅನಿಷ್ಟ ಸಂಪ್ರದಾಯಗಳ ಮತ್ತು ಹಳೆಯ ಕಂದಾಚಾರಗಳಿಗೆ ಬಲಿಯಾಗುವ ಹೆಣ್ಣಿನ ನೋವಿನ ಚಿತ್ರಣವಿದೆ. ವಿಧವಾ ಜೀವನದ ಸಮಸ್ಯೆಗಳನ್ನು ವಿವೇಚಿಸಲಾಗಿದೆ.

ಎಂ.ಕೆ ಇಂದಿರಾ ಅವರು ತಮ್ಮ ಜೀವನದ ದಟ್ಟ ಅನುಭವಗಳನ್ನೇ ಮೂಲವನ್ನಾಗಿಸಿಕೊಂಡು ಬಾಲ್ಯ ವಿವಾಹ, ವೇಶ್ಯಾ ಪದ್ಧತಿ, ವಿಧವಾ ವಿವಾಹ ಸಮಸ್ಯೆ ಮುಂತಾದ ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ಕುರಿತು ೬೫ಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ತುಂಗಭದ್ರ ಇವರ ಮೊದಲ ಕಾದಂಬರಿ.ಗೆಜ್ಜೆಪೂಜೆ, ಫಣಿಯಮ್ಮ, ಸದಾನಂದ, ಹೂ ಬಾಣ ಕಾದಂಬರಿಗಳು ಚಲನ ಚಿತ್ರಗಳಾಗಿವೆ. ಗೆಜ್ಜೆಪೂಜೆ ಕಾದಂಬರಿಯು ವೇಶ್ಯಾ ಸಮಸ್ಯೆಯನ್ನು ಕುರಿತದ್ದು. ಇವರ ಕಾದಂಬರಿಗಳಲ್ಲಿ ಸ್ತ್ರೀಯರ ಉನ್ನತಿ ಮತ್ತು ಸಮಾಜ ಸುಧಾರಣೆಯ ವಿಚಾರಗಳನ್ನು ಕಾಣಬಹುದು.

ಕನ್ನಡ ಸಾಹಿತ್ಯದಲ್ಲಿ ಗಮನ ಸೆಳೆದ ಮತ್ತೊಬ್ಬ ಲೇಖಕಿ ತ್ರಿವೇಣಿ. ಇವರ ಮೊದಲ ಹೆಸರು ಅನುಸೂಯ ಶಂಕರ್. ಅಪಾರ ಓದುಗರನ್ನು ಸೃಷ್ಟಿಸಿದ ಕೀರ್ತಿ ಇವರದು. ಶರ ಪಂಜರ, ಬೆಕ್ಕಿನ ಕಣ್ಣು, ಹೂವು-ಹಣ್ಣು, ಅಪಸ್ವರ, ಸೋತು ಗೆದ್ದವಳು, ಅಪಜಯ, ಹಣ್ಣೆಲೆ ಚಿಗುರಿದಾಗ, ಅವಳ ಮಗಳು ಮುಂತಾದ ಕಾದಂಬರಿಗಳನ್ನು, ಹೆಂಡತಿಯ ಹೆಸರು, ಎರಡು ಮನಸ್ಸು, ಸಮಸ್ಯೆಯ ಮಗು ಎಂಬ ಕಥಾ ಸಂಕಲನಗಳನ್ನು ಬರೆದಿದ್ದಾರೆ. ಶರ ಪಂಜರ, ಬೆಕ್ಕಿನ ಕಣ್ಣು ಮನೋವೈಜ್ಞಾನಿಕ ನೆಲೆಯಿಂದ ಗುರುತಿಸ

ಬಹುದಾದ ಕಾದಂಬರಿಗಳಾದರೆ, ಹೂವು-ಹಣ್ಣು ವೇಶ್ಯಾ ಸಮಸ್ಯೆಯನ್ನು ಕುರಿತಾದದ್ದು. ಒಟ್ಟು ಇವರು ಆಧುನಿಕ ಹೆಣ್ಣಿನ ಮನಸ್ಸಿನ ತೊಳಲಾಟಗಳನ್ನು ಚಿತ್ರಿಸಿದ್ದಾರೆ.

ಅನುಪಮಾ ನಿರಂಜನರ ಮೊದಲ ಹೆಸರು ವೆಂಕಟಲಕ್ಷ್ಮಿ. ಇವರ ಮೊದಲ ಕಾದಂಬರಿ ಅನಂತ ಗೀತ. ಋಣ, ಸ್ನೇಹ ಪಲ್ಲವಿ, ಆಕಾಶ ಗಂಗೆ, ನಟಿ, ಮಾಧವಿ, ಎಳೆ, ಸೇವೆ, ಮುಕ್ತಿ ಚಿತ್ರ, ಸಸ್ಯ ಶ್ಯಾಮಲಾ ಮುಂತಾದ ಕಾದಂಬರಿಗಳನ್ನೂ, ಕಲ್ಲೋಲ ಎಂಬ ನಾಟಕವನ್ನೂ, ಕಣ್ಮಣಿ, ಏಳು ಸುತ್ತಿನ ಮಲ್ಲಿಗೆ, ಹೃದಯ ಸಮುದ್ರ, ಗಿರಿಧಾಮ, ಒಂದು ಗಿಣಿಯ ಕತೆ, ಮುಂತಾದ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಮಾಧವಿ ಪೌರಾಣಿಕ ವಸ್ತುವನ್ನಾಧರಿಸಿದ ಕೃತಿ. ಅನುಪಮಾ ಅವರ ಕಾದಂಬರಿಗಳಲ್ಲಿ ಹೆಣ್ಣು ಸಮಾನತೆಯ ಕಡೆಗೆ ತುಡಿಯುವುದನ್ನು ಕಾಣ ಬಹುದು.

ವೀಣಾ ಶಾಂತೇಶ್ವರ, ವಿಜಯಾ ದಬ್ಬೆ, ಬಿ.ಎನ್ ಸುಮಿತ್ರಾ ಬಾಯಿ, ಸಾರಾ ಅಬೂಬಕರ್, ಬಿ.ಟಿ ಲಲಿತಾ ನಾಯಕ್, ಗೀತಾ ನಾಗಭೂಷಣ, ವೈದೇಹಿ ಮುಂತಾದವರನ್ನು ಮೂರನೇ ಹಂತದ ಲೇಖಕಿಯರೆಂದು ಗುರುತಿಸ ಬಹುದು. ಈ ಹಂತದಲ್ಲಿ ಕಥೆ, ಕವನ, ಕಾದಂಬರಿ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳ ಜೊತೆಗೆ ಸಂಪಾದನೆ, ವಿಮರ್ಶೆ, ಸಂಶೋಧನೆ ಮುಂತಾದ ಸಾಹಿತ್ಯ ಪ್ರಕಾರದ ಕಡೆಗೂ ತಮ್ಮ ಚಿತ್ತ ಹರಿಸಿದರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಡಾ. ವಿಜಯಾ ದಬ್ಬೆ ಅವರದು ಮಹತ್ವದ ಹೆಸರು. ಸೃಜನ ಶೀಲ ಲೇಖಕಿಯಾಗಿ, ಸಂಶೋಧಕಿಯಾಗಿ, ಸಂಪಾದಕಿಯಾಗಿ, ಸ್ತ್ರೀವಾದಿ ಚಿಂತಕಿಯಾಗಿ ಮಹಿಳಾ ಚಳವಳಿಯ ಸಕ್ರಿಯ ಹೋರಾಟಗಾರ್ತಿಯಾಗಿ, ಪ್ರಗತಿಪರ ಚಿಂತಕಿಯಾಗಿ ವಿಜಯಾ ದಬ್ಬೆ ಅವರದು ಬಹಳ ದೊಡ್ಡ ಹೆಸರು. ಸಮತಾ ವೇದಿಕೆಯನ್ನು ಸ್ಥಾಪಿಸುವ ಮೂಲಕ ಸ್ತ್ರೀವಾದಿ ಚಳವಳಿಗೆ ಹೊಸ ದಿಕ್ಕು ನೀಡಿದರು. ತಿರುಗಿ ನಿಂತ ಪ್ರಶ್ನೆ, ನೀರು ಲೋಹದ ಚಿಂತೆ, ಇರುತ್ತವೆ ಎಂಬ ಕವನ ಸಂಕಲನಗಳನ್ನೂ, ಮಹಿಳೆ ಮತ್ತು ಸಾಹಿತ್ಯ, ನಾರಿ ದಾರಿ ದಿಗಂತ, ಮಹಿಳೆ ಮತ್ತು ಮಾನವತೆ ಎಂಬ ವಿಮರ್ಶಾ ಸಂಕಲನಗಳನ್ನೂ ಹಿತೈಷಿಣಿಯ ಹೆಜ್ಜೆಗಳು (ತಿರುಮಲಾಂಬ), ಶ್ಯಾಮಲಾ ಸಂಚಯ (ಶ್ಯಾಮಲಾ ದೇವಿ ಬೆಳಗಾಂವಕರ), ಸಾರ ಸರಸ್ವತಿ (ಸರಸ್ವತಿ ಗೌಡರ) ಎಂಬ ಹಿರಿಯ ಲೇಖಕಿಯರ ಕುರಿತಾದ ಗ್ರಂಥಗಳನ್ನು ರಚಿಸಿದ್ದಾರೆ.

ಸಾರಾ ಅಬೂಬಕರ್ ಅವರ "ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು" ಎಂಬ ಕತೆಯಿಂದ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಜಗತ್ತಿನ ಸ್ತ್ರೀಯರ ಸಮಸ್ಯೆಗಳ ಅನಾವರಣವಾಯಿತು. ಸಹನಾ, ವಜ್ರಗಳು, ಚಂದ್ರಗಿರಿಯ ತೀರದಲ್ಲಿ ಎಂಬ ಇವರ ಪ್ರಸಿದ್ಧ ಕಾದಂಬರಿಗಳಲ್ಲಿ ಮುಸ್ಲಿಂ ಹೆಣ್ಣು ಮಕ್ಕಳ ನೋವುಗಳನ್ನು ಚಿತ್ರಿಸಿರುವುದು ಸಾಹಿತ್ಯದ ದೃಷ್ಟಿಯಿಂದ ಮಹತ್ವದ ಹೆಜ್ಜೆಯಾಗಿದೆ. ಬಿ.ಟಿ ಲಲಿತಾ ನಾಯಕ್ ಅವರ ಕೃತಿಗಳಲ್ಲಿ ಬಂಡಾಯ ಮನೋಧರ್ಮವನ್ನು ಗುರುತಿಸ ಬಹುದು. ಇವರ ಕಥೆ, ಕಾದಂಬರಿ, ನಾಟಕಗಳಲ್ಲಿ ಜಾತೀಯತೆ, ಮಹಿಳೆಯರ ಶೋಷಣೆ, ಬಂಡಾಯದ ಧ್ವನಿ, ದಲಿತರ ನೋವಿನ ಚಿತ್ರಣಗಳನ್ನು ಕಾಣಬಹುದು. ನಂ ರೂಪ್ಲಿ, ಇದೇ ಕೂಗು ಮತ್ತೆ ಮತ್ತೆ, ಒಡಲ ಬೇಗೆ, ನೆಲೆ ಬೆಲೆ, ಗತಿ ಎಂಬ ಕಾದಂಬರಿಗಳನ್ನು, ಹಬ್ಬ ಮತ್ತು ಬಲಿ, ಮೂರು ಕಾಸಿನ ಹೆಣ್ಣು, ಎಂಬ ಕಥಾ ಸಂಕಲನಗಳನ್ನು, ಬುದ್ಧಂತರು, ಪ್ರೇಮ ವಿವಾಹ, ನಂಬಿ ಕೆಟ್ಟೆನಲ್ಲೋ ತಾಗುವ ಮುನ್ನ, ಬಾಗುವ ತಲೆ ಲೇಸು ಎಂಬ ಬಾನುಲಿ ನಾಟಕಗಳನ್ನು ಬರೆದಿದ್ದಾರೆ.

ಗೀತಾ ನಾಗಭೂಷಣ ಅವರು ತಾವರೆಯ ಹೂವು, ಬದುಕು, ಹೆಣ್ಣಿನ ಕೂಗು ಮುಂತಾದ ೨೭ ಕಾದಂಬರಿಗಳನ್ನು, ಕಥೆ, ನಾಟಕ, ಸಂಶೋಧನೆ, ಸಂಪಾದನೆ ಹೀಗೆ ಹಲವು ಕ್ಷೇತ್ರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಇವರ "ಬದುಕು" ಕಾದಂಬರಿಗೆ ೨೦೦೪ ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಗದಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಕೂಡ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಮೊದಲ ಮಹಿಳಾ ಸಾಹಿತಿ ಎಂಬ ಹಿರಿಮೆ ಇವರದು.

ವೈದೇಹಿ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಜಾನಕಿ ಶ್ರೀನಿವಾಸ ಮೂರ್ತಿಯವರು ಮರ ಗಿಡ ಬಳ್ಳಿ, ಗೋಲ, ಅಂತರಂಗದ ಪುಟಗಳು, ಸಮಾಜಶಾಸ್ತ್ರಜ್ಞೆಯ ಪುಟಗಳು, ಅಮ್ಮಚ್ಚಿಯೆಂಬ ನೆನಪು, ಕ್ರೌಂಚಪಕ್ಷಿಗಳು ಎಂಬ

ಕಥಾಸಂಕಲನಗಳನ್ನು, ಬಿಂದು ಬಿಂದಿಗೆ, ಪಾರಿಜಾತ, ದೀಪದೊಳಗಿನ ದೀಪ ಎಂಬ ಕವನ ಸಂಕಲನಗಳನ್ನು, ಅಸ್ಪೃಶ್ಯರು ಎಂಬ ಕಾದಂಬರಿಯ ಜೊತೆಗೆ ಹಲವು ಮಕ್ಕಳ ನಾಟಕಗಳನ್ನು, ಅನುವಾದ ಕೃತಿಗಳನ್ನು, ಜೀವನ ಚರಿತ್ರೆಗಳನ್ನು ಕೂಡ ಬರೆದಿದ್ದಾರೆ. ಇವರ ಕ್ರೌಂಚಪಕ್ಷಿಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ದೊರೆತಿದ್ದು, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳೊಂದಿಗೆ ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ. ಕುಂದಾಪುರ ಕನ್ನಡದ ಬಳಕೆ, ಸ್ತ್ರೀಲೋಕದ ಸೂಕ್ಷ್ಮ ಅಂಶಗಳು ಇವರ ಕೃತಿಗಳ ವಿಶೇಷತೆ.

ಸ್ತ್ರೀ ಶಿಕ್ಷಣದ ಕುರಿತಾಗಿ ಅಪಾರ ಆಸಕ್ತಿ ಹೊಂದಿದ್ದ ವೀಣಾ ಶಾಂತೇಶ್ವರ ಅವರ ಮೊದಲ ಕಥಾ ಸಂಕಲನ "ಮುಳ್ಳುಗಳು". ಕೊನೆಯ ದಾರಿ, ಕವಲು, ಹಸಿವು, ಬಿಡುಗಡೆ ಇವರ ಇತರ ಕಥಾ ಸಂಕಲನಗಳು. "ನಡೆದದ್ದೇ ದಾರಿ" ಇವರ ಸಮಗ್ರ ಕಥಾ ಸಂಕಲನ. ತುಂಬಾ ಹರಿತವಾದ ಬರವಣಿಗೆಯ ಮೂಲಕ ಕಥಾ ಸಂಕಲನಗಳ ಜೊತೆಗೆ ಅನುವಾದ, ವಿಮರ್ಶಾ ಕ್ಷೇತ್ರದಲ್ಲೂ ಕಾರ್ಯ ನಿರ್ವಹಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಜೊತೆಗೆ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಎನ್. ಮಂಗಳಾ ಸತ್ಯನ್, ಆರ್ಯಾಂಬಾ ಪಟ್ಟಾಭಿ, ಕೆ. ಸರೋಜಾ ರಾವ್, ಸಾಯಿಸುತೆ, ಅಶ್ವಿನಿ, ಎಚ್. ರಾಧಾದೇವಿ ಮುಂತಾದವರು ಜನಪ್ರಿಯ ಸಾಹಿತ್ಯದ ಲೇಖಕಿಯರಾಗಿ ಹೆಸರುವಾಸಿಯಾಗಿದ್ದಾರೆ.

ಪ್ರಸ್ತುತ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಲೇಖಕಿಯರನ್ನು ನಾಲ್ಕನೇ ಹಂತಕ್ಕೆ ಸೇರಿಸ ಬಹುದು. ಗಂಗಾ ಪಾದೇಕಲ್, ನೇಮಿಚಂದ್ರ, ಭಾಗೀರಥಿ ಹೆಗಡೆ, ರೇಖಾ ಕಾಖಂಡಕಿ, ಲಲಿತಾ ಸಿದ್ದಬಸವಯ್ಯ, ಎಚ್. ಎಲ್ ಪುಷ್ಪ, ಪ್ರತಿಭಾ ನಂದ ಕುಮಾರ್, ಸವಿತಾ ನಾಗಭೂಷಣ, ದು. ಸರಸ್ವತಿ, ಎಚ್. ಎಸ್ ಮುಕ್ತಾಯಕ್ಕ, ಸ.ಉಷಾ, ಎಚ್. ನಾಗವೇಣಿ ಹೇಮಾ ಪಟ್ಟಣ ಶೆಟ್ಟಿ, ಸುಕನ್ಯಾ ಮಾರುತಿ, ಅನಸೂಯ ಕಾಂಬಳೆ, ಶಶಿಕಲಾ ವೀರಯ್ಯ ಸ್ವಾಮಿ, ಎಂ. ಎಸ್ ಆಶಾದೇವಿ, ಭಾನುಮುಷ್ತಾಕ್, ಬಿ.ಟಿ ಜಾನ್ವವಿ, ಸಬಿತಾ ಬನ್ನಾಡಿ, ರೂಪ ಹಾಸನ, ಜ.ನಾ ತೇಜಶ್ರೀ, ವಿನಯಾ ಒಕ್ಕುಂದ, ಕೆ. ಶರೀಫಾ, ಎಂ.ಆರ್ ಕಮಲ, ಕಮಲಾ ಹೆಮ್ಮಿಗೆ, ಗುಡಿಬಂಡೆ ಪೂರ್ಣಿಮ, ಶಶಿಕಲಾ ವಸ್ತ್ರದ, ಮಾಲತಿ ಪಟ್ಟಣ ಶೆಟ್ಟಿ, ವಿಜಯಶ್ರೀ ಸಬರದ, ಮಲ್ಲಿಕಾ ಘಂಟಿ, ಎಚ್. ಎಸ್ ಪಾರ್ವತಿ, ಪ್ರೀತಿ ಶುಭಚಂದ್ರ ಇನ್ನೂ ಹಲವರು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ,

ಕವಿ ಕಾಲದ ಶಿಶು ಎಂಬ ಒಂದು ಪ್ರಸಿದ್ಧವಾದ ಮಾತಿದೆ. ಸಾಹಿತ್ಯ ಸಮಾಜದ ಕನ್ನಡಿ ಇದ್ದ ಹಾಗೆ. ಆಯಾಯ ಕಾಲದ, ಪರಿಸರದ ಜನ ಜೀವನ, ಜೀವನ ಮೌಲ್ಯಗಳು ಸಾಹಿತ್ಯದ ಮೂಲಕ ಅಭಿವ್ಯಕ್ತವಾಗುತ್ತಾ ಹೋಗುತ್ತವೆ. ಯಾವುದೇ ಶಾಸ್ತ್ರದ ಮೊದಮೊದಲ ಹೆಜ್ಜೆಗಳು ಅಸ್ಪಷ್ಟವಾಗಿದ್ದು ಆನಂತರ ಸ್ಪಷ್ಟತೆಯ ಕಡೆಗೆ ಬೆಳವಣಿಗೆ ಹೊಂದುವುದನ್ನು ಕಾಣಬಹುದು. ಹಾಗೇಯೇ ಮಹಿಳಾ ಸಾಹಿತ್ಯವು ಇಂದು ತನ್ನ ವಿಶಾಲ ಹರಹನ್ನು ಚಾಚಿಕೊಂಡಿದೆ. ಸ್ತ್ರೀ, ಸ್ತ್ರೀಲೋಕ, ಸ್ತ್ರೀಶೋಷಣೆ, ಸ್ತ್ರೀಯರ ಬದುಕು-ಬವಣೆ ಇವುಗಳಾಚೆಗೆ ಈ ಹೊತ್ತಿನ ಮಹಿಳಾ ಬರವಣಿಗೆಗಳು ವಿಸ್ತರಿಸಿಕೊಂಡಿರುವುದನ್ನು ಕಾಣಬಹುದು. ಮೊದಲ ಹಂತದ ಮಹಿಳಾ ಬರವಣಿಗೆಗಳಲ್ಲಿ ಆ ಕಾಲದ ಹೆಣ್ಣಿನ ಬದುಕನ್ನು, ಶೋಷಣೆಯನ್ನು ಅನಾವರಣಗೊಳಿಸಿದ್ದೆ ಬಹಳ ಮುಖ್ಯವಾಗುತ್ತದೆ. ಪುರಾಣಗಳ, ಧರ್ಮಶಾಸ್ತ್ರಗಳ ಹೆಸರಿನಲ್ಲಿ ಸತೀಪದ್ಧತಿ, ವಿಧವಾ ಪದ್ಧತಿ, ವೇಶ್ಯಾ ಪದ್ಧತಿ, ಬಾಲ್ಯ ವಿವಾಹ ಮುಂತಾದ ಆಚರಣೆಗಳ ಮೇಲೆ ಬೆಳಕು ಚೆಲ್ಲುವ ಕೆಲಸ ನಡೆಯಿತು. ಮುಂದುವರೆದಂತೆ ಈ ರೀತಿಯ ಅನಿಷ್ಟ ಪದ್ಧತಿಗಳ ವಿರುದ್ಧದ ಹೋರಾಟದ ನೆಲೆಗಳನ್ನು ಎರಡನೇ ಹಂತದ ಲೇಖಕಿಯರಲ್ಲಿ ಗುರುತಿಸ ಬಹುದು.

ಒಂದು ಹಂತದವರೆಗೆ ಅಡುಗೆ ಮನೆ ಸಾಹಿತ್ಯ, ಜನಪ್ರಿಯ ಸಾಹಿತ್ಯ ಮುಂತಾದ ಹೆಸರಿನಿಂದ ವಿಮರ್ಶಾವಲಯದಿಂದ ಅವಜ್ಞೆಗೆ ಒಳಗಾಗಿದ್ದ ಮಹಿಳಾ ಸಾಹಿತ್ಯವು ಇದುವರೆಗೂ ಗುರುತಿಸಲಾಗಿದ್ದ ಮಿತಿಗಳಾಚೆಗೆ ಮಹಿಳಾ ಸಂವೇದನೆಗಳು ಅಭಿವ್ಯಕ್ತಗೊಂಡು, ಯಾವುದೇ ವೈಭವೀಕರಣವಿಲ್ಲದೇ ವಾಸ್ತವಿಕತೆಗೆ ಹತ್ತಿರವಾಗಿ ಸೃಜನಶೀಲ-ಸೃಜನೇತರ ಸಾಹಿತ್ಯ ಪ್ರಕಾರಗಳಲ್ಲಿ ಹೆಣ್ಣಿನ ಅಂತರಂಗದ ಗಟ್ಟಿ ಧ್ವನಿಗಳು ಹೊರ ಹೊಮ್ಮಿವೆ. ಆದಿಕಾಲದಿಂದಲೂ ಹೆಣ್ಣನ್ನು ವಂಚಿಸುತ್ತಾ, ಶೋಷಿಸುತ್ತಾ ಬಂದಿರುವ ಪುರುಷ

ಪ್ರಧಾನ ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನು ಒಡ್ಡಿಕೊಂಡು ಅನೇಕ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಾ ಬಂದಿದ್ದಾಳೆ. ಆಧುನಿಕತೆಯ ಜೊತೆಗೆ ಆಧುನಿಕೋತ್ತರ ಸ್ವರೂಪದ ಬರವಣಿಗೆಗಳು, ಆಧುನಿಕ ಸಮಾಜದಲ್ಲಿ ಹೆಣ್ಣಿನ ಅಸ್ಮಿತೆಯನ್ನು ವಿವರಿಸಿಕೊಳ್ಳುವುದು ಹೇಗೆಂಬ ಜಿಜ್ಞಾಸೆಯನ್ನು ಇತ್ತೀಚಿನ ಮಹಿಳಾ ಸಾಹಿತ್ಯದಲ್ಲಿ ಗುರುತಿಸಬಹುದು.

## ಪರಾಮರ್ಶನ ಗ್ರಂಥಗಳು


1. ಆಧುನಿಕ ಮಹಿಳಾಸಾಹಿತ್ಯ ಇನ್ನಷ್ಟು ಪುಟಗಳು – ಸಂ: ಡಾ. ಎಂ . ಉಷಾ
2. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ – ಸಂ: ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ
3. ಕನ್ನಡ ಸಾಹಿತ್ಯ ಪರಂಪರೆ – ಡಾ. ಎಸ್ . ಪ್ರಸಾದಸ್ವಾಮಿ
4. ಸ್ತ್ರೀವಾದ ಒಂದು ಅವಲೋಕನ _ ಬಿ.ಎನ್ .ಸುಮಿತ್ರಾಬಾಯಿ
5. ವೈದೇಹಿ ಗೌರವ ಗ್ರಂಥ _ ಸಂ: ಸವಿತಾ ನಾಗಭೂಷಣ , ತಾರಿಣಿ ಶುಭದಾಯಿನಿ